# ಕೇಶ ವಿನ್ಯಾಸದಲ್ಲೂ ನೂರಾರು ಬಗೆ!

**ಕಾಲ ಕಾಲಕ್ಕೆ ಕೂದಲ ವಿನ್ಯಾಸ ಬದಲಿಸಿಕೊಂಡು ಹೊಸ ಹೊಸ ಕೇಶ ಶೈಲಿಗೆ ಮಾರು ಹೋಗುವುದು ಫ್ಯಾಷನ್‌ಪ್ರಿಯರ ಹವ್ಯಾಸ. ಫ್ಯಾಷನ್ ಬಯಸುವ ಮಹಿಳೆಯರಿಗಾಗಿಯೇ ಇದೀಗ ವಿಭಿನ್ನ ವಿನ್ಯಾಸಗಳ ಹೇರ್ ಟ್ರಿಮ್, ಹೇರ್ ಕಟ್ ಲಭ್ಯವಿದ್ದು, ಕೇಶರಾಶಿಯಲ್ಲೂ ಹೊಸತನ ಬಯಸುವವರಿಗೆ ನೂರಾರು ದಾರಿಗಳಿವೆ.**

**■ ಉಮಾ ಅನಂತ್**

**ಚಿತ್ರಗಳು: ಅನುಷಾ ಕೋರ**



ಮದುವೆಗಳಲ್ಲಿ ಉಡುಪು, ಒಡವೆಗಳಷ್ಟೇ ಕೇಶ ವಿನ್ಯಾಸಕ್ಕೂ ಪ್ರಾಮುಖ್ಯತೆ ನೀಡಲಾಗುತ್ತದೆ. ಮಿಂಚುವ ಸೀರೆ, ಒಡವೆಗಳ ಜತೆಗೆ ಕೇಶ ಶೈಲಿಯೂ ಮದುಮಗಳ ಅಲಂಕಾರಕ್ಕೆ ವಿಶೇಷ ಮೆರುಗು ನೀಡುತ್ತದೆ. ಮದುವೆಯಲ್ಲಿ ಸಾಂಪ್ರದಾಯಿಕ ಕೇಶ ವಿನ್ಯಾಸಕ್ಕೆ ಆದ್ಯತೆ ನೀಡುವುದಾದರೂ ರಿಸೆಪ್ಶನ್‌ಗಳಲ್ಲಿ ಮದುಮಗಳಿಗೆ ವಿಶೇಷವಾದ ಕೇಶ ಶೈಲಿಗೇ ಆದ್ಯತೆ ನೀಡಲಾಗುತ್ತದೆ.

ಅದೊಂದು ಅದ್ದೂರಿ ಮದುವೆ. ಮದುವಣಗಿತ್ತಿ ಆಕರ್ಷಕವಾಗಿ ಕಾಣುತ್ತಿದ್ದಳು. ಭರ್ಜರಿ ರೇಷ್ಮೆ ಸೀರೆ, ಅದಕ್ಕೊಪ್ಪುವ ಒಡವೆಗಳು.. ಕೈಗಳಲ್ಲಿ ಮೆಹೆಂದಿಯ ಚಿತ್ತಾರ, ಕಾಲ್ಗಳಲ್ಲಿ ಗೆಜ್ಜೆಯ ನಾದ.. ಇವೆಲ್ಲದರ ಜತೆಗೆ ಆಕೆ ಗಮನಸೆಳೆದದ್ದು ಸುಂದರ ಕೇಶ ವಿನ್ಯಾಸದಿಂದ. ಸಾಮಾನ್ಯವಾಗಿ ಮದುಮಗಳು ಮೊಗ್ಗಿನ ಜಡೆ ಹಾಕಿಕೊಳ್ಳುವುದು ಪದ್ಧತಿ. ಆದರೆ ಈ ಯುವತಿ ಉದ್ದನೆಯ ಜಡೆಯನ್ನು ಮಲ್ಲಿಗೆ ಹೂವು, ಗುಲಾಬಿ ಎಸಳುಗಳಿಂದ ಶೃಂಗರಿಸಿ ಅದರ ಮೇಲೆ ಅಲ್ಲಲ್ಲಿ ಹೊಂಬಣ್ಣದ ಜಡೆಬಿಲ್ಲೆ, ಮಧ್ಯೆ ಮಧ್ಯೆ ಮುತ್ತುಗಳನ್ನು ಪೋಣಿಸಿ ವಿಭಿನ್ನ ಬಗೆಯ ಕೇಶವಿನ್ಯಾಸದಿಂದ ಕಂಗೊಳಿಸುತ್ತಿದ್ದಳು.

ಮದುವೆ ರಿಸೆಪ್ಶನ್‌ಗಳಲ್ಲೂ ಯುವತಿಯರು ಆಕರ್ಷಕ ಕೇಶ ವಿನ್ಯಾಸ ಮಾಡಿಸಿಕೊಳ್ಳುತ್ತಾರೆ. ಇದಕ್ಕಾಗಿ ಬ್ರೈಡಲ್ ಮೇಕಪ್ ಮಾಡುವ ಪಾರ್ಲರ್ ಒಡತಿಯರು ವಿಭಿನ್ನ ಬಗೆಯ ಕೇಶ ಶೃಂಗಾರ ಮಾಡುತ್ತಾರೆ. ಅವರವರ ಭಾವಕ್ಕೆ, ನಿಲುವಿಗೆ, ಕೇಶ ಶೈಲಿಗೆ ಸರಿ ಹೊಂದುವ ವಿನ್ಯಾಸ ಮಾಡಿ 'ಎಂದೂ ಮರೆಯದ ದಿನ'ವನ್ನು ಸ್ಮರಣೀಯವಾಗಿಸುತ್ತಾರೆ.

ಕೇಶವಿನ್ಯಾಸದಲ್ಲಿ ನೂರೆಂಟು ಬಗೆ. ಉದ್ದ ಕೂದಲಿನವರು ಹೇಗೆ ಯಾವ ರೀತಿ ಕೇಶ ಶೈಲಿ ಮಾಡಿಸಿಕೊಂಡರೆ ಚೆನ್ನಾಗಿ ಕಾಣಬಹುದು, ಗಿಡ್ಡ ಅಥವಾ ಮೋಟು ಕೂದಲಿನವರ ಕೇಶಕ್ಕೆ ಎಂಥ ವಿನ್ಯಾಸ ಒಪ್ಪುತ್ತದೆ ಎಂಬುದನ್ನು ಯೋಜನೆ ಹಾಕಿಕೊಂಡು ಅದರಂತೆ ಕೇಶ ಶೈಲಿ ರೂಪಿಸಿಕೊಳ್ಳುತ್ತಾರೆ. ಗಿಡ್ಡ ಕೂದಲಿನವರು ಹೇರ್‌ಟ್ರಿನ್ ಮಾಡಿಸಿಕೊಂಡು ಬಾಬ್‌ಕಟ್, ಬ್ಲಂಟ್ ಕಟ್, ಪಿಕ್ಸಿ ಕಟ್ ಮಾಡಿಸಿಕೊಳ್ಳಬಹುದು.

ಉದ್ದ ಕೂದಲನ್ನು ಹಲವು ರೀತಿಯಲ್ಲಿ ಸುಂದರ ವಿನ್ಯಾಸ ಮಾಡಿಕೊಳ್ಳಬಹುದು. ನೀಳಕೂದಲನ್ನು ಸುಂದರವಾಗಿ ಸುತ್ತಿ ಅಲಂಕಾರಿಕ ಕ್ಲಿಪ್ ಹಾಕಿಕೊಂಡರೆ ನಿಮಿಷದಲ್ಲಿ ಕೇಶವಿನ್ಯಾಸ ಮುಗಿಸಿಬಿಡಬಹುದು. ಜತೆಗೆ ಮುತ್ತು, ಹವಳವನ್ನು ಒಂದೊಂದಾಗಿ ಇಡುತ್ತಾ ಬಂದರೆ ಕೇಶಶೈಲಿ ಚೆನ್ನಾಗಿ

